KACN320004822014

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ,ಕೊಳ್ಳೇಗಾಲ**

**ದಿನಾಂಕಃ 30ನೇ ಜನವರಿ 2026**

**ಉಪಸ್ಥಿತರು**

**ಶ್ರೀಮತಿ. ಕಾವ್ಯಶ್ರೀ ಎಂ. ಬಿ.ಎ., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ಕೊಳ್ಳೇಗಾಲ**

**ಅಸಲು ದಾವಾ ಸಂಖ್ಯೆ.48/2014**

**ವಾದಿ** : ನಾರಾಯಣಶೆಟ್ಟಿ ಬಿನ್ ಲೇಟ್ ಭೋಗಶೆಟ್ಟಿ,
ಸುಮಾರು 60 ವರ್ಷ,
ವಾಸಃ ಮಳಿಗೆ ನಂ. 1, ಬಾಂಬೆ ಹೇರ್ ಡ್ರಸಸ್,
ಹೊಸ ಬಸ್ ನಿಲ್ದಾಣ ಮಳಿಗೆ,
ಕೊಳ್ಳೇಗಾಲ ಪಟ್ಟಣ,ಚಾಮರಾಜನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಎಂ.ಆರ್.ಕೆ., ವಕೀಲರು)**

**ವಿರುದ್ಧ/-**

**ಪ್ರತಿವಾದಿ** : ಪೌರಾಯುಕ್ತರು,ನಗರಸಭೆ,
ಕೊಳ್ಳೇಗಾಲ ಪಟ್ಟಣ,
ಚಾಮರಾಜನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಎಸ್.ಎಸ್.ಬಿ., ವಕೀಲರು)**

**ಅರ್ಜಿ ಸಂಖ್ಯೆಃ 9/2024**

**ಅರ್ಜಿದಾರರು** : ಆಯುಕ್ತರು
........ ಪ್ರತಿವಾದಿ

**ವಿರುದ್ಧ**

**ಎದುರುದಾರರು** : ನಾರಯಣಶೆಟ್ಟಿ
....... ವಾದಿ

| | | |
|---|---|---|
| *i* | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ **VI** ನಿಯಮ **17** |
| *ii* | ಅರ್ಜಿಯಲ್ಲಿ ಕೋರಿರುವ ಪರಿಹಾರ | ಪ್ರತಿವಾದ ಪತ್ರದ ತಿದ್ದುಪಡಿ ಆದೇಶವನ್ನು ಕೋರಿ |
| *iii* | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | **31.07.2024** |
| | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ **9** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | **23.09.2024** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | **22.01.2026** |

**<u>ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 9ರ ಮೇಲಿನ ಆದೇಶ</u>**

ಅರ್ಜಿದಾರರು/ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 9 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಪ್ರಸ್ತಾಪಿಸಿರುವಂತೆ ಪ್ರತಿವಾದಪತ್ರದಲ್ಲಿ ತಿದ್ದುಪಡಿ ಮೂಲಕ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ಸೇರ್ಪಡೆ ಮಾಡಲು ಅನುಮತಿಯನ್ನು ಕೋರಿಕೊಂಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಆ ಸಮಯದಲ್ಲಿ ಬಾಕಿ ಇರುವ ಬಾಡಿಗೆಯ ಅಂಶವನ್ನು ಹಾಗೂ ಯಾವ ಕಾರಣಕ್ಕಾಗಿ ದಾವ ಅನುಸೂಚಿತ ಸ್ವತ್ತಿನ ಸ್ವಾದೀನವನ್ನು ಪಡೆದುಕೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಇತ್ತೀಚೆಗೆ ತಿಳಿದು ಬಂದಿರುತ್ತದೆ. ಸದರಿ ಸಂಗತಿಯನ್ನು ಪ್ರತಿವಾದಪತ್ರದಲ್ಲಿ ಸೇರ್ಪಡೆ ಮಾಡುವುದು ಅವಶ್ಯಕವಾಗಿರುತ್ತದೆ. ಆದರೆ, ಆ ರೀತಿಯಾಗಿ ಸಂಗತಿಯನ್ನು ಸೇರ್ಪಡೆ ಮಾಡದೇ ಇರುವುದು ಉದ್ದೇಶ ಪೂರ್ವಕವಾಗಿರುವುದಿಲ್ಲ. ಸದರಿ ಸಂಗತಿಯನ್ನು ಸೇರ್ಪಡೆ ಮಾಡುವುದರಿಂದ ದಾವೆಯ ಸ್ವರೂಪ ಬದಲಾವಣೆಯಾಗುವುದಿಲ್ಲ. ಅರ್ಜಿಯನ್ನು ಪುರಸ್ಕರಿಸುವುದರಿಂದ ವಾದಿಗೆ ಯಾವುದೇ ರೀತಿಯಾಗ ತೊಂದರೆಯುಂಟಾಗುವುದಿಲ್ಲ. ಆದ್ದರಿಂದ, ಸದರಿ ಸಂಗತಿಗಳನ್ನು ಪ್ರತಿವಾದಪತ್ರದಲ್ಲಿ ಸೇರ್ಪಡೆ ಮಾಡಲು ಅನುಮತಿ ನೀಡಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

3. ಸದರಿ ಮೇಲ್ಕಂಡ ಅರ್ಜಿಗೆ ವಾದಿಗಳು ತಮ್ಮ ತಕರಾರು ಸಲ್ಲಿಸಿ, ಪ್ರತಿವಾದಿಯರು ಉದ್ದೇಶ ಪೂರ್ವಕವಾಗಿ 10 ವರ್ಷಗಳ ನಂತರ ತಿದ್ದುಪಡಿ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ತಿದ್ದುಪಡಿ ಕಾನೂನು ಬಾಹಿರವಾಗಿದ್ದು, ತಿದ್ದುಪಡಿ ಮಾಡಲು ಕಾನೂನಿನಡಿಯಲ್ಲಿ ಅವಕಾಶ ಇರುವುದಿಲ್ಲ. ಮುಂದುವರೆದು, ವಾದಿಯು ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುವ ಸಂಭಂದ ತಿದ್ದುಪಡಿ ಸಂಗತಿಗಳು ದಾವೆಯ ವಿಲೆಗೆ ಅವಶ್ಯಕ ಸಂಗತಿಗಳಾಗಿರುವುದಿಲ್ಲ. ಪ್ರತಿವಾದಿಯು ಪ್ರಸ್ತುತ ಹಾಗೂ ಹಾಲಿ ಸಂಗತಿಗಳನ್ನು ದಾವೆಯಲ್ಲಿ ಸೇರ್ಪಡೆಗೊಳಿಸಲು ಬರುವುದಿಲ್ಲ. ಈಗಾಗಲೇ ಪ್ರತಿವಾದಪತ್ರದಲ್ಲಿ ತಮ್ಮ ಎಲ್ಲಾ ಸಂಗತಿಯನ್ನು ನಿರೂಪಿಸಿರುತ್ತಾರೆ. ಪ್ರತಿವಾದಪತ್ರಕ್ಕೆ ತಿದ್ದುಪಡಿ ಕೋರಿಕೊಂಡಿರುವುದು ಹೊಸ ವ್ಯಾಜ್ಯ ಕಾರಣವನ್ನು ಸೃಷ್ಟಿಸುತ್ತದೆ, ಆದಕಾರಣ ತಿದ್ದುಪಡಿಗೆ ಅವಕಾಶ ನೀಡಲು ಅವಕಾಶ ಇರುವುದಿಲ್ಲ. ಪ್ರತಿವಾದಿಯು ವಾದಿಗೆ ಈವರೆವಿಗೂ ಸಹ ಯಾವುದೇ ನೋಟಿಸ್ ನೀಡಿರುವುದಿಲ್ಲ, ಹಾಗಾಗಿ ತಿದ್ದುಪಡಿ ಮೂಲಕ ಸುಳ್ಳು ಮಾಹಿತಿಯನ್ನು ಸೇರ್ಪಡೆ ಮಾಡಲು ಅವಕಾಶ ಇರುವುದಿಲ್ಲ. ಪ್ರತಿವಾದಿಯು ತನ್ನ ಅರ್ಜಿಯಲ್ಲಿ ಕೋರಿಕೊಂಡಿರುವ ಸಂಗತಿಗಳು ವಾದಿಯ ದಾವೆಯನ್ನು ಪರಿಣಾಮಕಾರಿಯಾಗಿ ವಿಲೆಗೊಳಿಸಲು ಅವಶ್ಯಕತೆ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸುವಂತೆ ಕೋರಿಕೊಂಡಿರುತ್ತಾರೆ.

4. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

ಅಂಶ 1:- ಅರ್ಜಿದಾರರು/ಪ್ರತಿವಾದಿಯು ಕೋರಿಕೊಂಡಿರುವ ತಿದ್ದುಪಡಿಯು ದಾವೆಯಲ್ಲಿನ ಸಂಗತಿಗಳನ್ನು ನಿರ್ಧರಿಸುವಲ್ಲಿ ಅಗತ್ಯವಾಗಿರುತ್ತದೆ ಎಂಬುದಾಗಿ ರುಜುವಾತು ಪಡಿಸಿರುವರೇ?

ಅಂಶ 2:- ಯಾವ ಆದೇಶ?

5. ಉಭಯಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳ ಅನ್ವಯ ಈ ಮೇಲ್ಕಂಡ ಸಂಗತಿಗಳಿಗೆ ಈ ಕೆಳಕಂಡರೆ ಉತ್ತರಿಸಲಾಗಿದೆ.

ಅಂಶ 1:- ಸಕರಾತ್ಮಕವಾಗಿ,

ಅಂಶ 2:- ಈ ಕೆಳಕಂಡ ಆದೇಶದಂತೆ,

**ಕಾರಣಗಳು**

6. ಅಂಶ 1:- ವಾದಿಯು ದಾವಾಸ್ತಿಗೆ ಸಂಭಂದಿಸಿದಂತೆ ಪ್ರತಿವಾದಿಗಳ ವಿರುದ್ದ ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.

7. ಪ್ರತಿವಾದಿಯು ತನ್ನ ಅರ್ಜಿಯಲ್ಲಿ, ಪ್ರತಿವಾದಪತ್ರದಲ್ಲಿ, ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಪಾವತಿಸಬೇಕಾದ ಬಾಡಿಗೆಯ ಮೊತ್ತವನ್ನು ಹಾಗೂ ಯಾವ ಕಾರಣಕ್ಕಾಗಿ ವಾದಿಯಿಂದ ಸ್ವತ್ತಿನ ಸ್ವಾದೀನವನ್ನು ಪಡೆಯಬೇಕಾಗಿರುತ್ತದೆ ಎಂಬ ಬಗ್ಗೆ ತಿದ್ದುಪಡಿ ಕೋರಿಕೊಂಡಿದ್ದು, ಸದರಿ ಸಂಗತಿಯನ್ನು ಪ್ರತಿವಾದಪತ್ರದಲ್ಲಿ ಸೇರ್ಪಡೆ ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಅರ್ಜಿ ಸಲ್ಲಿಸಿ ತಿದ್ದುಪಡಿಗೆ ಅನುಮತಿ ಕೋರಿಕೊಂಡಿರುತ್ತಾರೆ. ವಾದಿಯು ತನ್ನ ತಕರಾರಿನಲ್ಲಿ, ವಾದಿಯು ಪ್ರತಿವಾದಿಯು ತಿಳಿಸಿರುವಂತೆ ಬಾಡಿಗೆ ಹಣವನ್ನು ಪಾವತಿಸಬೇಕಾಗಿರುವುದಿಲ್ಲ. ಹಾಗೂ ತಿದ್ದುಪಡಿ ಸಂಗತಿಗಳು ವಾದಿಯ ದಾವೆಯನ್ನು ಪರಿಣಾಮಕಾರಿಯಾಗಿ ವಿಲೆ ಮಾಡುವಲ್ಲಿ ಅವಶ್ಯಕ ಸಂಗತಿ ಆಗಿರುವುದಿಲ್ಲ. ಆದಕಾರಣ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿ ಕೊಂಡಿರುತ್ತಾರೆ.

8. ಮುಂದುವರೆದು, ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಯನ್ನು ಪರಿಶೀಲಿಸಲಾಗಿ ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂದಿಸಿದಂತೆ ಶಾಶ್ವತ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ದಾಖಲು ಮಾಡಿರುತ್ತಾರೆ. ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿ, ವಾದಿಯು ಪಾವತಿಸಬೇಕಾದ ಬಾಡಿಗೆ ಹಣದ ಬಗ್ಗೆ ತಿಳಿಸಿರುತ್ತಾರೆ. ಹಾಗೂ, ಕರಾರು ಅವಧಿ ಮುಕ್ತಾಯ ನಂತರವೂ ಸಹ ವಾದಿಯ ಕಾನೂನು ಬಾಹಿರವಾಗಿ ಸ್ವತ್ತಿನ ಸ್ವಾದೀನಾನುಭವದಲ್ಲಿ ಇರುತ್ತಾರೆ. ಸದರಿ ಸ್ವತ್ತಿನಲ್ಲಿ ಹೊಸದಾಗಿ ಬಸ್ಸ್ ನಿಲ್ದಾಣವನ್ನು ನಿರ್ಮಾಣ ಮಾಡುವ ಉದ್ದೇಶಹೊಂದಿರುತ್ತಾರೆ. ಹಾಗೂ ವಾದಿಯನ್ನು ಬಾಡಿಗೆಯನ್ನು ಪಾವತಿ ಮಾಡುವಂತೆ ಕೋರಿಕೊಂಡಾಗ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ, ವಾದಿಯು ಸದರಿ ಸಂಗತಿಯನ್ನು ಅಲ್ಲಗಳೆಯುತ್ತಾರೆ. ಈ ಹಂತದಲ್ಲಿ ಯಾವುದೇ ಸಾಕ್ಷಾಧಾರಗಳನ್ನು ಪರಿಶೀಲಿಸದೇ ಆ ಯಾವುದೇ ಸಂಗತಿಗಳನ್ನು ಪರಿಗಣಿಸಲು ಬರುವುದಿಲ್ಲ.

ವಾದಿಯು ಶಾಶ್ವತ ನಿರ್ಭಂದಕಾಜ್ಞೇಯನ್ನು ದಾಖಲು ಮಾಡಿದ್ದು, ಸದರಿ ದಾವೆಯಲ್ಲಿ ಪ್ರತಿವಾದಿಯು, ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಕಾನೂನು ಬಾಹಿರವಾಗಿ ಸ್ವಾದೀನಾನುಭವನ್ನು ಹೊಂದಿರುತ್ತಾರೆ ಎಂಬುದಾಗಿ ತಮ್ಮ ನಿಲುವನ್ನು ತೆಗೆದುಕೊಳ್ಳುವುದು ಸಹ ವಾದಿಯ ದಾವೆಯಲ್ಲಿನ ಸಂಗತಿಯನ್ನು ಪರಿಣಾಮಕಾರಿಯಾಗಿ ನಿರ್ಧರಿಸಲು ಅವಶ್ಯಕ ಸಂಗತಿಯಾಗಿರುತ್ತದೆ. ಇನ್ನುಳಿದ ಸಂಗತಿಗಳನ್ನು ತಿದ್ದುಪಡಿ ಮೂಲಕ ಸೇರ್ಪಡೆ ಮಾಡಲು ಅವಕಾಶ ನೀಡಿದ್ದೇ ಆದಲ್ಲಿ, ವಾದ ಪತ್ರದಲ್ಲಿ ನ್ಯಾಜ್ಯ ಕಾರಣ

ಬದಲಾಗುವುದಿಲ್ಲ ಹಾಗೂ ದಾವೆಯ ಸ್ವರೂಪವು ಸಹ ಬದಲಾಗುವುದಿಲ್ಲ. ಅರ್ಜಿದಾರರು ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯಂತೆ ನಿರೂಪಿಸಿರುವ ಎಲ್ಲಾ ಸಂಗತಿಗಳನ್ನು ರುಜುವಾತುಪಡಿಸುವ ಭಾರ ಹೊಂದಿರುತ್ತಾರೆ.

9. ಮುಂದುವರೆದು, ಯಾವುದೇ ಒಂದು ದಾವೆಯಲ್ಲಿ ಪ್ರಸ್ತಾಪಿಸಿರುವ ತಿದ್ದುಪಡಿಯನ್ನು ಅನುಮೋದನೆ ಮಾಡಲು ಸದರಿ ತಿದ್ದುಪಡಿಯು, 1) ದಾವೆ ವ್ಯಾಜ್ಯ ಕಾರಣವನ್ನು ಬದಲಾಯಿಸಿರುವುದಿಲ್ಲ. 2) ಸದರಿ ತಿದ್ದುಪಡಿಯನ್ನು ಮಾಡುವ ಕಾರಣ ವಾದಿ ದಾವಾದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಈ ದಾವೆಯಲ್ಲಿ ಪ್ರಸ್ತಾಪಿಸಲಾದ ತಿದ್ದುಪಡಿಯನ್ನು ಸೇರ್ಪಡೆ ಮಾಡುವುದರಿಂದ ವ್ಯಾಜ್ಯಾಕಾರಣವಾಗಲೀ, ದಾವೆಯ ಸ್ವರೂಪವಾಗಲಿ ಬದಲಾವಣೆಯಾಗುವುದಿಲ್ಲ.

10. ಮುಂದುವರೆದು, **ರಾಜೇಶ್ ಕುಮಾರ್ ಮತ್ತು ಇನ್ನೊಬ್ಬರು ಕೆ.ಕೆ.ಮೋದಿ, ಎ.ಐ.ಆರ್ 2006 ಸಂಖ್ಯೆ 1647** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಅನುಮೊದಿಸುವುದರಿಂದ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣಕ್ಕಾಗಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ನಂಬುವುದಾದರೆ ಅಂತಹ ಸಂದರ್ಭದಲ್ಲಿ ತಿದ್ದುಪಡಿಯನ್ನು ಅನುಮೋದಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ. ಸದರಿ ಪ್ರಕರಣದಲ್ಲಿನ ಅಂಶಗಳನ್ನು ಎತ್ತಿಹಿಡಿಯುತ್ತಾ, **ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಜೆ.ಬಿ.ಎಲ್.ಫೆರೋರ್ ಮತ್ತು ಇನ್ನೊಬ್ಬರು ವಿರುದ್ಧ ಥೆರೋಸಾ ಫೆರೋರ್ (2004) (4) ಕೆಸಿಸಿಆರ್ 2249** ಪ್ರಕರಣದ ಪ್ಯಾರಾ ಸಂಖ್ಯೆ 13 ಮತ್ತು 14ರಲ್ಲಿ ಸರ್ವೋಚ್ಛ ನ್ಯಾಯಾಲಯವು ಮೇಲ್ಕಂಡ ಪ್ರಕರಣದಲ್ಲಿ ವಿವರಿಸಿದ ಅಂಶಗಳನ್ನು ಎತ್ತಿ ಹಿಡಿಯುತ್ತಾ, ತಿದ್ದುಪಡಿಯಲ್ಲಿ ಪ್ರಸ್ತಾಪಿಸಿದ ಅಂಶ ದಾವೆಯ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತಹ ಸಂದರ್ಭದಲ್ಲಿ ಅನುಮೋದಿಸಬಹುದೆಂದು ತಿಳಿಸಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಲಾಗಿ ವಾದಿ ಪ್ರಸ್ತಾಪಿಸಿರುವ ತಿದ್ದುಪಡಿಯು ದಾವೆಯ ಮೂಲ ಸ್ವರೂಪಕ್ಕೆ ಮತ್ತು ವ್ಯಾಜ್ಯ ಕಾರಣವಾಗಲಿ ಬದಲಾವಣೆ ಆಗದೇ ಇರುವುದರಿಂದ ಪ್ರತಿವಾದಿಯು ತಿಳಿಸಿರುವ ತಿದ್ದುಪಡಿಯನ್ನು ಅನುಮೋದಿಸಬಹುದೆಂದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. **ಆದ್ದರಿಂದ ಅಂಶ-1ನ್ನು ಸಕರಾತ್ಮಕವಾಗಿ ಉತ್ತರಿಸಲಾಯಿತು.**

**11. ಅಂಶ 2 :-** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

**ಆದೇಶ**

ಅರ್ಜಿದಾರರು/ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 9 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಅರ್ಜಿಯನ್ನು ರೂ. 500ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶವಾದ 14 ದಿನಗಳ ಒಳಗಾಗಿ ವಾದಿ ತನ್ನ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 30.01.2026 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ.ಎಂ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**ಆದೇಶ**

ಅರ್ಜಿದಾರರು/ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 9 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ಅರ್ಜಿಯನ್ನು ರೂ. 500ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶವಾದ 14 ದಿನಗಳ ಒಳಗಾಗಿ ವಾದಿ ತನ್ನ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು.

ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ **13.02.2026**

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.